'ನೀವು ತೋರಿಸುತ್ತಿರುವ ಹಾದಿಯಲ್ಲಿ ಕಷ್ಟಗಳು ತುಂಬಿವೆ. ನನಗೆ ನನ್ನ ಸ್ವಂತ ದೌರ್ಬಲ್ಯಗಳ ಅರಿವಿದೆ' ಎಂದಾಗ, ಮಹರ್ಷಿಗಳು 'ತಮ್ಮನ್ನು ತಾವು ಅಡ್ಡಿಪಡಿಸಿಕೊಳ್ಳಲು ಇದು ಉತ್ತಮ ಮಾರ್ಗ. ಸೋಲಿನ ಭಯದಿಂದ ಮತ್ತು ಸ್ವಂತ ಸೋಲಿನ ಭಾವನೆಯಿಂದ ಮನಸ್ಸನ್ನು ಹೊರೆಯಾಗಿಸಿಕೊಳ್ಳುವುದು ತಪ್ಪು ಮಾರ್ಗ. ತಾನು ಪ್ರಾಕೃತಿಕವಾಗಿ ಅಶಕ್ತ, ಕೆಟ್ಟವನು ಎಂದೆಲ್ಲಾ ಭಾವಿಸುವುದು ಮನುಷ್ಯನ ದೊಡ್ಡ ತಪ್ಪು. ಪ್ರತಿಯೊಬ್ಬನೂ ದಿವ್ಯಾತ್ಮನೇ, ತನ್ನ ನಿಜವಾದ ಪ್ರಕೃತಿಯಲ್ಲಿ ಬಲಿಷ್ಠನೇ.' ಎನ್ನುತ್ತಾರೆ. ಅವರ ಸನ್ನಿಧಿಯಲ್ಲಿ ಅನೇಕರು ಶಾಂತಿಯನ್ನು ಪಡೆಯುತ್ತಿದ್ದುದರ ಚಿತ್ರಗಳನ್ನು ನೀಡಿದ್ದಾರೆ. ಮಹರ್ಷಿ ಪರಂಪರೆಯ ಮುಂದುವರಿಕೆಯಾಗಿ ವಾಸ್ತವ ಜಗತ್ತಿನಲ್ಲೂ ಯಶಸ್ವಿ ವ್ಯಕ್ತಿಯಾಗಿದ್ದು ವರ್ಷದಲ್ಲಿ ಮೂರು ನಾಲ್ಕು ತಿಂಗಳುಗಳನ್ನು ರಮಣರ ಒಡನಾಟದಲ್ಲಿ ಕಳೆಯುತ್ತಿದ್ದ ಯೋಗಿ ರಾಮಯ್ಯನವರ ಬಗ್ಗೆ ವಿವರಿಸುತ್ತಾರೆ. ಇವರ ಜತೆಗಿನ ಧ್ಯಾನದಲ್ಲೂ ತನ್ನೊಳಗೆ ನಿಧಾನವಾಗಿ ಶಾಂತಿ ಇಳಿಯುತ್ತಿರುವಂತಹ ಅನುಭವವಾಗುತ್ತದೆ ಎಂಬುದನ್ನು ಕಂಡುಕೊಳ್ಳುತ್ತಾರೆ. ರಮಣರ ಸನ್ನಿಧಿಯಲ್ಲಿ ಪಡೆದ ವಿಶ್ವಪ್ರಜ್ಞೆಯ ಅನುಭವವನ್ನೂ, ಆ ವಿಸ್ತೃತ ಸತ್ಯದ ಹಲವು ಸೆಳಕುಗಳನ್ನು ಕೊನೆಯಲ್ಲಿ ನೀಡಿದ್ದಾರೆ.

ಅನುವಾದ ಸೊಗಸಾಗಿದೆ. ಕೆಲವು ಪದಗಳ ಆಯ್ಕೆ ತಪ್ಪೇನೋ ಅನ್ನಿಸುತ್ತದೆ. ಉದಾಹರಣೆಗೆ ಜ್ಯೋತಿಷ್ಯದ ಪರಿಭಾಷೆಯಲ್ಲಿ ಇಂಗ್ಲಿಷಿನ ಸ್ಟಾರ್ ಕನ್ನಡದಲ್ಲಿ ಗ್ರಹವಾಗಬೇಕು. ('ವಾಟ್ ದಿ ಸ್ಟಾರ್ಸ್ ಪೋರ್‌ಟೆಲ್' ಕನ್ನಡದಲ್ಲಿ 'ನಿಮ್ಮ ಗ್ರಹಗತಿ' ಆಗುತ್ತದೆ.) ಕನ್ನಡದ ಪದಗಳೂ ತೊಡಕನ್ನು ಉಂಟು ಮಾಡುತ್ತವೆ. ತಿಳಿವು ಅರಿವು ಒಂದೇ ಆದಮೇಲೆ, ತಿಳಿವಳಿಕೆ ಅರಿವಳಿಕೆಗಳು ಬೇರೆ ಏಕಾಗಬೇಕು? ಹೀಗಾಗಿ, ಮೂಲದ 'But whatever I am doing I never fail to become gradually aware of the mysterious atmosphere of the place, of the benign radiations which steadily percolate into my brain (p.201)' ಎಂಬ ವಾಕ್ಯ ಪುಟ ೩೭೨ರಲ್ಲಿ 'ಆದರೆ ನಾನು ಏನೇ ಮಾಡುತ್ತಿದ್ದರೂ, ಆ ಸ್ಥಳದ ಮಹಾತ್ಮೆಯ ಬಗ್ಗೆ ನನ್ನಲ್ಲಿ ಅರಿವಳಿಕೆ ಮೂಡುತ್ತಿದ್ದುದಂತೂ ನಿಜ. ಅಲ್ಲಿನ ಪ್ರಭಾವಶಾಲಿ ವಿಕಿರಣಗಳು ನನ್ನನ್ನು ಗಾಢವಾಗಿ ಪ್ರಭಾವಿಸುತ್ತಿದ್ದವು.' ಎಂದಾಗಿದೆ. ಇಂಗ್ಲಿಷ್ ಮುದ್ರಣದಲ್ಲಿರುವ ಚಿತ್ರಗಳನ್ನು ಇಲ್ಲೂ ಬಳಸಿದ್ದರೆ ಚೆನ್ನಿತ್ತು. ಪುಸ್ತಕವನ್ನು ಸುಂದರವಾಗಿ ಕಡಿಮೆ ಬೆಲೆಯಲ್ಲಿ ಹೊರತಂದ ಪ್ರಕಾಶಕರಿಗೆ ಧನ್ಯವಾದಗಳು.

*ಡಾ. ಹೆಚ್. ಪಾಂಡುರಂಗ ವಿಠಲ* ❖


## ಶ್ರೀರಾಮಕೃಷ್ಣ ಶಾರದಾಶ್ರಮ, ಪೊನ್ನಂಪೇಟೆ – 571216, ಕೊಡಗು ಜಿಲ್ಲೆ

Phone : 08274-249040, 249555; Email: srkseva@gmail.com; Website: rkmponnampet.org

## ವಸಂತ ವಿಹಾರ

**(ಬೇಸಿಗೆ ರಜದಲ್ಲಿ ಗಂಡುಮಕ್ಕಳಿಗಾಗಿ ಮೌಲ್ಯವರ್ಧನಾ ಕಾರ್ಯಾಗಾರ)**

**12.4.2015 ರಿಂದ 19.5.2015**

ಪ್ರಿಯ ಸ್ನೇಹಿತರೇ,

ಪೊನ್ನಂಪೇಟೆಯ ಆಶ್ರಮದ ಆವರಣದಲ್ಲಿ ಭಗವಾನ್ ಶ್ರೀರಾಮಕೃಷ್ಣರ ಭವ್ಯವಾದ ವಿಶ್ವಭಾವೈಕ್ಯ ಮಂದಿರವನ್ನು ನಿರ್ಮಿಸಲಾಗಿದೆ. ಈ ದೇವಾಲಯವನ್ನು ಕೇಂದ್ರಬಿಂದುವಾಗಿಟ್ಟುಕೊಂಡು, ಹಲವಾರು ಸೇವಾಕಾರ್ಯಗಳನ್ನು ಆಶ್ರಮವು ನಡೆಸುತ್ತಿದೆ. 11 ರಿಂದ 15 ವರ್ಷ ವಯಸ್ಸಿನ ಶಾಲಾ ಮಕ್ಕಳಿಗಾಗಿ '**ವಸಂತ ವಿಹಾರ**' ಎಂಬ ಬೇಸಿಗೆ ಶಿಬಿರವನ್ನು 12.4.2015ರಿಂದ 19.5.2015ರ ವರೆಗೆ ನಡೆಸಲಿದ್ದೇವೆ. ಈ ಶಿಬಿರವು ಬೆಳಗಿನಿಂದ ಸಂಜೆಯವರೆಗೆ ಇರುತ್ತದೆ. ಪರಸ್ಥಳಗಳಿಂದ ಬರುವ ಮಕ್ಕಳಿಗೆ ಆಶ್ರಮದಲ್ಲಿ ಮತ್ತು ಹತ್ತಿರದ ಕೆಲವು ಆವಾಸಿ ಶಾಲೆಗಳಲ್ಲಿ ತಂಗುವ ವ್ಯವಸ್ಥೆಯನ್ನೂ ಮಾಡಲಿದ್ದೇವೆ. ಮಕ್ಕಳಿಗೆ ಯೋಗಾಸನ, ಪ್ರಾಣಾಯಾಮ, ಏಕಾಗ್ರತೆಯನ್ನು ಬೆಳೆಸಿಕೊಳ್ಳುವ ವಿಧಾನ, ವ್ಯಕ್ತಿತ್ವ ವಿಕಾಸ, ಮೌಲ್ಯಶಿಕ್ಷಣ, ಪ್ರಾರ್ಥನೆ ಮುಂತಾದವುಗಳನ್ನು ಹೇಳಿಕೊಡಲಾಗುವುದು. ನಿಮ್ಮ ಮಕ್ಕಳನ್ನು ಈ ಕಾರ್ಯಕ್ರಮಕ್ಕೆ ಕಳುಹಿಸಿಕೊಡುವುದರಿಂದ ನಮ್ಮ ಸನಾತನ ಧರ್ಮದ ಮೌಲ್ಯಗಳ ಬಗ್ಗೆ ಅವರಿಗೆ ಅರಿವು ಮೂಡುತ್ತದೆ. ಸ್ವಾಮಿ ವಿವೇಕಾನಂದರ ಆಶಯದಂತೆ ಅವರನ್ನು ಯೋಗ್ಯ, ಉಪಯುಕ್ತ ಪ್ರಜೆಗಳನ್ನಾಗಿ ರೂಪಿಸುವುದೇ ನಮ್ಮ ಉದ್ದೇಶ.

**ಶಿಬಿರ ಶುಲ್ಕ :** **ವಸತಿ ರಹಿತ : ರೂ.350/- ; ವಸತಿ ಸಹಿತ : ರೂ.700/-.** ನೋಂದಾಯಿಸಿಕೊಳ್ಳಲು ಕೊನೆಯ ದಿನಾಂಕ : **8.4.2015**

ಪ್ರೀತಿ ಮತ್ತು ಶುಭಾಶಯಗಳೊಂದಿಗೆ,


**1) 11ರಿಂದ 15 ವರ್ಷ ವಯಸ್ಸಿನ ಗಂಡುಮಕ್ಕಳಿಗೆ ಮಾತ್ರ. 2) ಖಾಲಿ ಕಾಗದದಲ್ಲಿ ವಿದ್ಯಾರ್ಥಿಯ ಹೆಸರು, ವಯಸ್ಸು, ತರಗತಿ, ತಂದೆತಾಯಿಗಳ ಹೆಸರು, ವಿಳಾಸ, ಲ್ಯಾಂಡ್ ಫೋನ್ ಮತ್ತು ಮೊಬೈಲ್ ಫೋನ್ ನಂಬರುಗಳನ್ನು ಬರೆದು, ಡಿ.ಡಿ. ಮೂಲಕ ಹಣವನ್ನು ಆಶ್ರಮಕ್ಕೆ ಕಳುಹಿಸಿರಿ.**

**ಭಗವತ್ಸೇವೆಯಲ್ಲಿ ತಮ್ಮವ**
**ಸ್ವಾಮಿ ಬೋಧಸ್ವರೂಪಾನಂದ**
ಅಧ್ಯಕ್ಷರು

# ಇಂದ್ರ ಮತ್ತು ಪ್ರಹ್ಲಾದ

ಕಥೆ: **ರೇವತಿ** ಚಿತ್ರ : **ಶಂಕರ್**


**1** ಇಂದ್ರನ ಆಸ್ಥಾನದಲ್ಲಿ ಒಂದು ದಿನ...




**2** ಬೃಹಸ್ಪತಿಯ ಆಶ್ರಮ...




**3**





4
ಹೌದೆ?
ಸ್ವಾಮಿ, ಇದು ನಿಜಕ್ಕೂ ಆಶ್ಚರ್ಯದ ಸಂಗತಿ !
ವರದ ಬಲದಿಂದ ಹಾಗೂ ಪರಾಕ್ರಮದಿಂದ ಅಧಿಕಾರವನ್ನು ಕಿತ್ತುಕೊಳ್ಳುವುದು ಅಸುರರ ಮಾರ್ಗ. ಆದರೆ ಯೋಗ್ಯರಿಗೆ ಅದು ಸಹಜವಾಗಿಯೇ ಬಂದೊದಗುವುದು.
ಮಹಾವಿಷ್ಣುವಿನ ಮೇಲಿರುವ ಭಕ್ತಿಯಿಂದ, ಶೀಲದಿಂದ ಕೂಡಿದ ಜೀವನದಿಂದ ಪ್ರಹ್ಲಾದ ಅಸುರರ ಕುಲದಲ್ಲಿ ಹುಟ್ಟಿದರೂ, ಅವನಿಗೆ ಮೂರುಲೋಕಗಳ ಅಧಿಕಾರ ಬಂದೊದಗಿದೆ.
5
ಭಕ್ತನೂ ಶೀಲವಂತನೂ ಆದ ಪ್ರಹ್ಲಾದನಿಂದ ಅಧಿಕಾರವನ್ನು ಮರಳಿ ಪಡೆಯುವುದು ಹೇಗೆ?
ಇಂದ್ರ, ನಾನು ಇದಕ್ಕೆ ಪರಿಹಾರ ಸೂಚಿಸಲಾರೆ. ಅಸುರರ ಗುರುವಾದ ಶುಕ್ರಾಚಾರ್ಯರನ್ನು ಕೇಳು. ಅವರು ನಿನಗೆ ಪರಿಹಾರ ನೀಡಬಹುದು.
6
ಇಂದ್ರ, ಪ್ರಹ್ಲಾದನಿಂದ ಮೂರು ಲೋಕಗಳ ಅಧಿಕಾರವನ್ನು ಮರಳಿ ಪಡೆಯುವುದು ಅಸಾಧ್ಯ. ಏಕೆಂದರೆ ಅವನು ಅದಕ್ಕಾಗಿ ಆಸೆಪಟ್ಟವನಲ್ಲ. ದೇವತೆಗಳಿಗೂ ಅವನ ಅಧಿಕಾರವನ್ನು ಕಸಿದುಕೊಳ್ಳಲಾಗದು.
ದೇವಲೋಕದ ಅಧಿಕಾರ ಕಳೆದುಕೊಂಡ ನನ್ನನ್ನು ನೋಡಿ ಎಲ್ಲರೂ ಹಾಸ್ಯ ಮಾಡುವರು. ದಯವಿಟ್ಟು ನನಗೆ ಪರಿಹಾರ ಮಾರ್ಗ ತಿಳಿಸಿಕೊಡಿ.
7
ಆಗಲಿ. ಹೇಗಾದರೂ ಮಾಡಿ ಪ್ರಹ್ಲಾದನಿಂದ ಶೀಲವನ್ನು ತೆಗೆದುಕೋ. ಆಗ ಸತ್ಯ, ಧರ್ಮ ಹಾಗೂ ಇತರ ಐಶ್ವರ್ಯಗಳೆಲ್ಲವೂ ಅವನಿಂದ ಹೊರಟು ಹೋಗುವುವು. ಮತ್ತೆ ನಿನಗೆ ಅಧಿಕಾರ ದೊರೆಯುವುದು.
ನನ್ನೆಲ್ಲ ಪ್ರಯತ್ನಗಳನ್ನೂ ಮಾಡುತ್ತೇನೆ, ಸ್ವಾಮಿ.
ನೀನು ಈ ರೂಪದಿಂದ ಹೋಗಬೇಡ. ಬ್ರಾಹ್ಮಣ ಹುಡುಗನ ವೇಷದಲ್ಲಿ ಹೋಗು.







**10** ಪ್ರಹ್ಲಾದನಿಗೆ ಬ್ರಾಹ್ಮಣಕುಮಾರನ ಜ್ಞಾನದ ಹಸಿವನ್ನು ಕಂಡು ಆನಂದವಾಯಿತು. ಅವನಿಗೆ ಏನಾದರೂ ಉಡುಗೊರೆ ಕೊಡುವ ಬಯಕೆ ಪ್ರಹ್ಲಾದನಿಗುಂಟಾಯಿತು.




**11** ಪ್ರಹ್ಲಾದ ಆಶ್ಚರ್ಯದಿಂದ ಬ್ರಾಹ್ಮಣಕುಮಾರನತ್ತ ನೋಡಿದ.

